SMT MUKTHARUNNISA:— In which papers you have given advertisement about these schemes? Because as M.L.A. I don't know anything about these schemes. When this is the position, how can the general public will come to know of the schemes of the Minorities Development Corporation? Whether you will give wide publicity and advertisement?

SRI G. BASAVANNAPPA:— Sir, the Minorities Development Corporation has submitted for schemes in the year 1988 out of which Government have accorded approval for two schemes namely (1) Swawalambana Margin Money loan scheme and (2) Motor Driving Training scheme. The other two schemes are being examined.

ಅಧ್ಯಕ್ಷರು.— ತಮಗೆ ನಾಲ್ಕು ಸಲ ಅವಕಾಶ ಕೊಟ್ಟಿದ್ದೇನೆ ತಾವು ಕೂಡಿ.

ಶ್ರೀ ಆರ್.ಎನ್. ನಾಯಕ್.—ಈಗ ಕರ್ನಾಟಕ ರಾಜ್ಯದಲ್ಲಿರುವ ಮೈನಾರಿಟೀಸ್‌ನಲ್ಲಿ ಅವರಲ್ಲಿ ಮುಸ್ಲಿಂ ಇರಬಹುದು, ಕ್ರಿಶ್ಚಿಯನ್ಸ್ ಇರಬಹುದು. ಇದರ ಒಟ್ಟು ಪಾಪ್ಯುಲೇಷನ್ ಎಷ್ಟು? ಎಷ್ಟು ಪಾಪ್ಯುಲೇಷನ್‌ಗೆ ನೀವು ಒಂದು ಕೋಟಿ ರೂಪಾಯಿ ಕೊಟ್ಟಿರುವುದು? ಕೊಟ್ಟಿರುವ ಪ್ರಕಾರ ಪರ್ ಹೆಡ್‌ಗೆ ರೇಷ್ಯೂ ಎಷ್ಟು ಆಯಿತು ಎಂದು ಬೇಗಂ ಅವರು ಕೇಳುತ್ತಿರುವುದು. ಇದಕ್ಕೆ ಅವರು ಉತ್ತರವನ್ನು ಕೊಡಬೇಕು.

ಶ್ರೀ ಜಿ. ಬಸವಣ್ಣಪ್ಪ.— ಈಗ ಮೈನಾರಿಟೀಸ್ ಕಾರ್ಪೊರೇಷನನ್ನು ಕಂಪನಿಯು ಕಾಯ್ದೆಯ ಪ್ರಕಾರ ನೊಂದಣಿ ಮಾಡಿದ್ದೇವೆ. ಒಂದು ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದೆ. ಸ್ವಾವಲಂಬನಾ ಸ್ಕೀಮ್ ಎಂದು ಕೂಡ ಮಾಡಿದ್ದೇವೆ. ಈ ಹಣವನ್ನು ಎಂಟೈರ್ ಪಾಪ್ಯುಲೇಷನ್‌ಗೆ ಕೊಡುವುದಿಲ್ಲ. ಆರು ಸಾವಿರ ರೂಪಾಯಿ ವರಮಾನಕ್ಕೂ ಯಾರು ಕೆಳಗೆ ಇರುತ್ತಾರೆ, ಅಂತಹ ಕಡು ಬಡವರಿಗೆ ಈ ಸಹಾಯ ಸಿಗಬೇಕು ಅವರಿಗೆ ಕೊಡಬೇಕೆಂದು ಈ ನಿಗಮವನ್ನು ರೂಪಿಸಿದೆ.

MR. SPEAKER:— The question Nos. 25(108). 25(362) and 26(411) are carried over.

QUESTION NO. 27 (523)

SRI G. BASAVANNAPPA (Minister for Social Welfare):— Sir, this question may be held over.

MR SPEAKER:— The question is held over. Question No. 28(137) is also held over.

ಕಂದಾಯ ಇಲಾಖೆಯಲ್ಲಿರುವ ಶೀಘ್ರಲಿಪಿಗಾರರ ಬಗ್ಗೆ.

೧೦. ಶ್ರೀ ಗೋಪಾಲ ವಂಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಕಂದಾಯ ಇಲಾಖೆಯಲ್ಲಿರುವ ಶೀಘ್ರಲಿಪಿಗಾರರ ಸಂಖ್ಯೆ ಎಷ್ಟು ?

ಆ) ಆ ಪೈಕಿ ಹರಿಜನ, ಗಿರಿಜನ ಪಂಗಡಕ್ಕೆ ಸೇರಿದವರೆಷ್ಟು ?

ಇ) ಅವರಿಗೆ ಬಡ್ತಿ ನೀಡಲಾಗಿದೆಯೆ ?

ಈ) ಹಾಗಿಲ್ಲದಿದ್ದಲ್ಲಿ ಬಡ್ತಿ ನೀಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಯವರು).—

ಅ) ಕಂದಾಯ ಇಲಾಖೆಯಲ್ಲಿರುವ ಶೀಘ್ರಲಿಪಿಗಾರರ ಒಟ್ಟು ಸಂಖ್ಯೆ. ೧೪೩

ಆ) ಹರಿಜನ-ಗಿರಿಜನ ಪಂಗಡಕ್ಕೆ ಸೇರಿದವರ ಶೀಘ್ರಲಿಪಿಗಾರರ ಸಂಖ್ಯೆ ೫

ಇ) ಈ ನೌಕರರಿಗೆ ಅವರ ಜೇಷ್ಠತೆಗನುಗುಣವಾಗಿ ವಿಶೇಷಲಾತಿ ನಿಯಮಗಳಿಗನುಸಾರವಾಗಿ ಬಡ್ತಿ ನೀಡಲಾಗುತ್ತದೆ.

ಈ) ಬಡ್ತಿ ನೀಡಲಾಗುವ ಹುದ್ದೆಗಳ ಪೈಕಿ ಶೇಕಡ ೫೦ ರಷ್ಟನ್ನು ಶೀಘ್ರಲಿಪಿಗಾರರಿಂದ ತುಂಬ ಬೇಕಾಗಿರುತ್ತದೆ. ರೋಸ್ಟರ್ ನಿಯಮಾನುಸಾರ ಹರಿಜನ-ಗಿರಿಜನ ಪಂಗಡಕ್ಕೆ ಸೇರಿದ ನೌಕರರು ಬಡ್ತಿ ಹೊಂದಲು ಅರ್ಹರಾಗಿರುತ್ತಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ನಾನು ಶೀಘ್ರಲಿಪಿಗಾರರ ಬಗ್ಗೆ ಕೇಳಿದಾಗ ೧೪೩ ಮಂದಿ ಇದ್ದಾರೆ ಇದರಲ್ಲಿ ೫ ಮಂದಿ ಮಾತ್ರ ಹರಿಜನರು ಇದ್ದಾರೆಂದು ಹೇಳಿದ್ದಾರೆ. ನನ್ನ ಲೆಕ್ಕದ ಪ್ರಕಾರ ೨೬ ಮಂದಿಗೆ ಕೊಡಲೇ ಬೇಕಾಗುತ್ತದೆ. ೨೧ ಮಂದಿಗೆ ಕಡಿಮೆ ಮಾಡಿದ್ದೀರಿ. ಏಕೆ ಕಡಿಮೆ ಆಯಿತು. ಎರಡನೆಯದಾಗಿ ಇದುವರೆಗೆ ಪ್ರೊಮೋಷನ್ ಯಾರು ಯಾರಿಗೆ ಕೊಟ್ಟಿದ್ದೀರಿ, ಅದರಲ್ಲಿ ಹರಿಜನರು ಎಷ್ಟು ಜನರಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ. - ನಿಯಮಗಳ ಅನುಗುಣವಾಗಿ ನೇಮಕ ಮಾಡಾವಾಗ ಅರ್ಜಿ ಕೊಡಬೇಕಾಗುತ್ತದೆ. ಶೀಘ್ರಲಿಪಿಯಲ್ಲಿ ಕಡಿಮೆ ಹರಿಜನರು ಬಂದಿದ್ದಾರೆ. ಇಷ್ಟು ವರ್ಷದಿಂದ ೫ ಜನ ಹರಿಜನರು ಬಹಳ ಕಡಿಮೆ ಎಂದು ಒಪ್ಪಿಕೊಳ್ಳುತ್ತೇನೆ, ಇದು ಅಭಿಪ್ರಾಯ ತಪ್ಪು. ಶೀಘ್ರಲಿಪಿಗೆ ಬುದ್ಧಿವಂತಿಕೆ ಬೇಕಾಗುತ್ತದೆ ಬಹಳ ಶ್ರಮ ಪಡಬೇಕಾಗುತ್ತದೆ. ಆದಕ್ಕಾಗಿ ಟ್ರೈನಿಂಗ್ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಶೀಘ್ರಲಿಪಿಗಾರರಲ್ಲಿ ಸ್ವಲ್ಪ ಎರಡು ಭಾಗ ಶಿರಸ್ತೇದಾರರಾಗಲು ಅವಕಾಶ ಇದೆ, ನೌಕರರ ಸಂಘದವರು ಈ ಪ್ರಮಾಣವನ್ನು ಏತಕ್ಕೆ ಏರಿಸಲು ಬೇಡಿಕೆ ಕೊಟ್ಟಿದ್ದಾರೆ, ಎಷ್ಟು ಜನರಿಗೆ ಪ್ರೊಮೋಷನ್ ಸಿಕ್ಕಿದೆ ಎಂಬ ಬಗ್ಗೆ ನನ್ನ ಬಳಿ ವಿವರ ಇಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನೌಕರರ ಸಂಘದವರು ೫ ಜನರಿಗೆ ಮಾತ್ರ ಕೊಡಿ ಎಂದು ಕೇಳಿದ್ದಾರಾ. ೧೪೩ ಜನರಲ್ಲಿ ಈಗ ಆದ್ಯತೆ ಮೇಲೆ ಹರಿಜನರಿಗೆ ಕೊಡಬೇಕು. ೨೬ ಜನರಿಗೆ ನೀವು ಕೊಡಲೇಬೇಕಾಗುತ್ತದೆ. ೧೪೩ ಜನರಲ್ಲಿ ಎಷ್ಟು ಜನರಿಗೆ ಪ್ರೊಮೋಷನ್ ಕೊಟ್ಟಿದ್ದೀರಿ. ಹರಿಜನರಲ್ಲಿ ಬುದ್ಧಿವಂತರು ಇಲ್ಲವೆಂದು ಹೇಳಿದ್ದೀರಿ, ಹರಿಜನರಲ್ಲಿ ಬುದ್ಧಿವಂತರೂ ಇಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹಾಗೆ ಹೇಳಲಿಲ್ಲ. ಒಂದೂ ಕಡಿಮೆ ಎಂದು ಹೇಳಿದೆ. ಇದು ಕ್ಲೆರಿಕಲ್ ವರ್ಕ್, ಎಕ್ಸಿಕ್ಯೂಟೀವ್ ವರ್ಕ್ ಅಲ್ಲ ಆಫೀಸ್‌ನಲ್ಲಿ ಕಾಳಿತಂ ಕೆಲಸ ಮಾಡ ಬೇಕಾಗುತ್ತದೆ. ಮುಂದೆ ಹುದ್ದೆಗಳನ್ನು ಭರ್ತಿ ಮಾಡುವಾಗ ಹರಿಜನರಿಗೆ ಆದ್ಯತೆ ಕೊಡುತ್ತೇನೆಂದು ಹೇಳುತ್ತೇನೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನಿಗಮದಿಂದ ತೋಡಿಸಲಾದ ಕೊಳವೆ ಭಾವಿಗಳು.

೩೫೪. ಶ್ರೀ ಎಂ. ಶಿವಣ್ಣ ಹೆಗ್ಗಡ ದೇವನಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ೧೯೮೫ ರಿಂದ ಈವರೆಗೆ ವಿಶೇಷ ಘಟಕ ಯೋಜನೆಗಳ ಮೇರೆಗೆ ತೋಡಿಸಲಾಗಿರುವ ನೀರಾವರಿ (ಕೊಳವೆ) ಬಾವಿಗಳೆಷ್ಟು ? ನೀಡಲಾಗಿರುವ ಸಬ್ಸಿಡಿ ಹಣ ಎಷ್ಟು ?

೨) ತೋಡಲಾಗಿರುವ ಬಾವಿಗಳಲ್ಲಿ ಹಾಲಿ ನೀರಾವರಿ ಸೌಲಭ್ಯ ಪಡೆದಿರುವ ಬಾವಿಗಳೆಷ್ಟು ?

೩) ನೀರಾವರಿ ಬಾವಿಗಳನ್ನು ತೆಗೆದು ಒಂದು ವರ್ಷವಾಗುತ್ತಾ ಬಂದಿದ್ದರೂ ನೀರಾವರಿ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?